ಉತ್ತಮವಾಗಿದೆ ಎಂದು ಕಾಣುತ್ತದೆ. ಆದನ್ನು ಇಂಪ್ರೂವ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ತೀರ ಕಳಪೆ ಮನೆಗಳು ಇದ್ದರೆ ಅದನ್ನು ಬದಲಿಸಿ ಹೊಸ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಂ. ರಾಮಪ್ಪ.—ಮನೆಗಳ ಸ್ವಾಧೀನವನ್ನು ಏನೋ ಕೊಟ್ಟಿದ್ದೀರಿ ಆದರೆ ಆ ಮನೆಗಳು ಬೀಳುವ ಪರಿಸ್ಥಿತಿಯಲ್ಲಿದ್ದರೂ ಸಹ ಆ ಮನೆಗಳ ಮೇಲೂ ಕಂತನ್ನು ವಸೂಲು ಮಾಡುತ್ತಿದ್ದಾರೆ. ಕಂತುಗಳನ್ನು ಕೊಡಲೇಬೇಕಾಗುತ್ತದೆ. ನೀವುಗಳು ಯಾವ ರೀತಿ ಅವರಿಂದ ಕಂತುಗಳನ್ನು ಕಟ್ಟಿಸಿ ಕೊಳ್ಳುತ್ತೀರಿ ? ಇದರ ಬಗ್ಗೆ ಏನು ವ್ಯವಸ್ಥೆ ಮಾಡುತ್ತೀರಿ ?

ಶ್ರೀ ಪಿ ಜೆ. ಆರ್. ಸಿಂಧ್ಯಾ,—ಸ್ಪೆಸಿಫಿಕ್ ಇನ್‌ಸ್ಟೆನ್ಸ್ ಕೊಟ್ಟರೆ ಆದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಬಂಗಾರಪ್ಪ.—ಕಳಪೆ ಮನೆಗಳು. ಕ್ವಾಲಿಟಿ ಚೆನಾಗಿಲ್ಲ ಎಂದು ತಾವು ಆಗಲೇ ಒಪ್ಪಿಕೊಂಡಿದ್ದೀರಿ. ಹಣ ವಸೂಲು ಮಾಡುವುದಕ್ಕೆ ಪ್ರತಿ ತಿಂಗಳು ನೋಟೀಸ್ ಕೊಡುತ್ತೀರಿ. ಹೀಗೆ ಹಣ ವಸೂಲು ಮಾಡತಕ್ಕಂಥ ಕ್ರಮ ನಿಲ್ಲಿಸಿ. ಒಳ್ಳೆಯ ಮನೆಗಳು ಇದ್ದರೆ ವಸೂಲು ಮಾಡಿ. ಮನೆ ಬಿದ್ದರೆ ಸತ್ತು ಹೋದ ಹೆಣದ ಮೇಲೆ ಹಣ ವಸೂಲು ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಪಿ. ಜೆ. ಆರ್, ಸಿಂಧ್ಯಾ.—ಆ ಬಗ್ಗೆ ವಿಚಾರ ಮಾಡುತ್ತೇನೆ.

ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಗೆ ಆಕ್ಟ್ರಾಯ್ ಪರಿಹಾರ ನೀಡಿಕೆ

೪೫೯. ಶ್ರೀ ಎ ಎಂ. ಹಿಂಡಸಗೇರಿ (ಹುಬ್ಬಳ್ಳಿನಗರ) ಹಾಗೂ ಶ್ರೀ ಕೆ. ಹೆಚ್. ಪಾಟೀಲ್—(ಗದಗ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ ?

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಗೆ ಸರಕಾರವು ೫೫ ಲಕ್ಷ ರೂಪಾಯಿಗಳನ್ನು ಸಾಲದ ರೂಪವಾಗಿ ದಿನಾಂಕ ೨–೧೦–೧೯೫೫ ರಂದು ಮಂಜೂರು ಮಾಡಿದ್ದು ನಿಜವೆ,

ಆ) ಈ ಮೇಲಿನ ಸಾಲಕ್ಕೆ ಹುಬ್ಬಳ್ಳಿ–ಧಾರವಾಡ ಮಹಾನಗರ ಸಭೆಯು ಬೇಡಿಕೆ ಇದ್ದಿತೆ,

ಇ) ಹಾಗಿದ್ದರೆ, ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಯು ತರಾವಿನ ಪ್ರತಿಯನ್ನು ಒದಗಿಸಿರಿ.

ಈ) ಹುಬ್ಬಳ್ಳಿ ಧಾರವಾಡ ಮಹಾನಗರಸಭೆಗೆ ೧೯೭೮ ರಿಂದ ೧೯೮೪–೮೫ ರ ವರೆಗೆ ಮಂಜೂರು ಮಾಡಿದ ಆಕ್ಟ್ರಾಯ್ ಪರಿಹಾರ ಧನ(ವರ್ಷವಾರು ಅಂಕಿಗಳನ್ನು ಒದಗಿಸುವುದು),

ಉ) ಸರ್ಕಾರದಿಂದ ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಗೆ ೨.೫ ಕೋಟಿ ರೂಪಾಯಿಗಳಷ್ಟು ಜಕಾತಿ ಪರಿಹಾರ ನೀಡಬೇಕಾದುದು ನಿಜವೆ, ಹಾಗಿದ್ದರೆ ಸರ್ಕಾರವು ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಲು ಏನಾದರೂ ಕ್ರಮಗಳನ್ನು ತೆಗೆದುಕೊಂಡಿದೆಯೆ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ನಗರಾಭಿವೃದ್ಧಿಯ ಮಂತ್ರಿಗಳು)

ಅ) ನಿಜ.

ಆ) ಇಲ್ಲ. ಹುಬ್ಬಳ್ಳಿ-ಧಾರವಾಡ ಮಹಾನಗರ ಸಭೆಯ ಆಯುಕ್ತರು ೫೦ ಲಕ್ಷ ರೂಪಾಯಿಯ ವಿಶೇಷ ಅನುದಾನವನ್ನು ಮಂಜೂರು ಮಾಡಲು ಕೋರಿದ್ದರು.

ಇ) ಹುಬ್ಬಳ್ಳಿ ಧಾರವಾಡ ಮಹಾನಗರಸಭೆಯು ಯಾವ ತರಾವನ್ನೂ ಮಾಡಿರಲಿಲ್ಲ. ಆದುದರಿಂದ ತರಾವಿನ ಪ್ರತಿಯನ್ನು ಒದಗಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಹುಬ್ಬಳ್ಳಿ–ಧಾರವಾಡ ಮಹಾನಗರಸಭೆಗೆ ವರ್ಷವಾರು ಜಕಾತಿ ಪರಿಹಾರ ಧನ ಮಂಜೂರಾತಿ ಮಾಡಿದುದು ಈ ಕೆಳಕಂಡಂತಿದೆ.—

ವರ್ಷ	ಸರ್ಕಾರದಿಂದ ಮಂಜೂರಾದ ಹಣ
೧೯೭೮-೭೯	ಏನೂ ಇಲ್ಲ
೧೯೭೯-೮೦	ರೂ. ೧,೮೩,೮೨,೬೦೦
೧೯೮೦-೮೧	ರೂ. ೧,೮೩,೩೭,೩೬೦
೧೯೮೧-೮೨	ರೂ. ೨,೧೨,೩೬,೧೯೨
೧೯೮೨-೮೩	ರೂ. ೨,೫೨,೨೫,೪೭೫
೧೯೮೩-೮೪	ರೂ. ೨,೬೯,೮೬,೯೬೬
೧೯೮೪-೮೫	ರೂ. ೨೬,೯೫,೮,೬೯೬

ಉ) ಇದು ಸರಿಯಲ್ಲ. ಆದ್ದರಿಂದ ಸರ್ಕಾರ ಯಾವುದೇ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ. ಎಂ. ಹಿಂಡಸಗೇರಿ.—ಈ ಸಾಲಿನಲ್ಲಿ ೫೫ ಲಕ್ಷ ರೂಪಾಯಿಯನ್ನು ಸರ್ಕಾರದವರು ಕೊಟ್ಟಿದೀರಿ. ಈ ಹಣವನ್ನು ಪೂರ್ಣವಾಗಿ ಕಾರ್ಪೊರೇಷನ್ನಿನವರು ಕೆಲಸವನ್ನು ಮಾಡುವುದಕ್ಕೆ ಕೊಟ್ಟಿದ್ದಿರೋ ಅಥವಾ ಇಲ್ಲವೋ ಎಂಬುದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಹಣದ ಅಭಾವ ಇದೆ. ಆದ್ದರಿಂದ ನಮಗೆ ವಿಶೇಷ ಅನುದಾನ ಕೊಡಿ ಎಂದು ಕೇಳಿದ್ದೆವು. ಕಾರ್ಪೊರೇಷನ್ ಕಮಿಷನರ್‌ರವರು ಇನ್ನಿತರ ವಿಷಯಗಳ ಬಗ್ಗೆಯೂ ಪ್ರಸ್ತಾಪ ಮಾಡಿದ್ದಾರೆ. ಹಳ್ಳಿಗಳನ್ನು ತೆಗೆದುಕೊಂಡಿದ್ದೀರಿ, ಅಲ್ಲಿ ಅಭಿವೃದ್ಧಿ ಕೆಲಸ ನಡೆದಿಲ್ಲ. ಅಲ್ಲಿ ಸಿಬ್ಬಂದಿ ಸಂಬಳ ಜಾಸ್ತಿಯಾಗಿದೆ. ಆ ಊರುಗಳ ಕನಿಷ್ಟ ಪೌರಸೌಲಭ್ಯಗಳ ಬಗ್ಗೆ ಹಣದ ತೊಂದರೆ ಇದೆ. ಆದ್ದರಿಂದ ನಮಗೆ ಕನಿಷ್ಟ ಪಕ್ಷ ಆಷ್ಟಾದರೂ ಕೊಡಿ ಎಂದು ಕೇಳಿದ್ದರು. ಅದಕ್ಕೋಸ್ಕರ ಹಣ ಕೊಟ್ಟಿದ್ದೇವೆ.

ಶ್ರೀ ಕೆ. ಹೆಚ್. ಪಾಟೀಲ್.—ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾದ ಉತ್ತರವನ್ನು ಕೊಟ್ಟಿದ್ದಾರೆ. ತರಾವಿಲ್ಲ, ಬೇಡಿಕೆಯಿಲ್ಲ. ಕಾರ್ಪೊರೇಷನ್ ರಿಪೋರ್ಟ್ ಕೂಡ ಕೊಟ್ಟಿಲ್ಲ. ಹಣ ಕೊಟ್ಟಿದ್ದೀರಿ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ಸೆಕ್ಷನ್ ೧೫೫ರಲ್ಲಿ ಕಾರ್ಪೊರೇಷನ್ ಆಕ್ಟ್‌ಪ್ರಕಾರ ಇದೆ. ಅದರ ಪ್ರಕಾರ ಮಾಡತಕ್ಕಂಥ ಅಧಿಕಾರ ಇದೆ. ಇವತ್ತಿನವರೆಗೂ ರೆಸಲ್ಯೂಷನ್ ಮಾಡಿಲ್ಲ. ಸರ್ಕಾರದವರು ಹಣ ಕೊಟ್ಟಿದ್ದೀರಿ. ಮಾನ್ಯ ಮಂತ್ರಿಗಳು ಚುನಾವಣಾ ಪ್ರಚಾರದ ಸಲುವಾಗಿ ಖರ್ಚು ಮಾಡಿದ್ದಾರೆ. ಕಾನೂನು ಮೀರಿದವರ ಮೇಲೆ ನೀವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಎ. ಲಕ್ಷ್ಮೀಸಾಗರ್.—ಅದನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಕೆ. ಎಚ್. ಪಟೀಲ್.—ಇದನ್ನು ಕೊಟ್ಟ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದನ್ನು ನಾನು ಪರಿಶೀಲಿಸುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.—ನಾನು ಪ್ರಶ್ನೆ ಕೇಳಿದ ಮೇಲೆ ಇವರು ಪರಿಶೀಲಿಸುತ್ತೇನೆ ಎಂದು ಹೇಳಬೇಕಾದರೆ ಇವರು ಇದನ್ನು ಅಭ್ಯಾಸ ಮಾಡಿಲ್ಲವೆಂದು ಆಗುತ್ತದೆ. ಇದೇನು ಮಿಸ್-ಅಪ್ರೊಪ್ರಿಯೇಶನ್ ಆಫ್ ಪಬ್ಲಿಕ್ ಫಂಡ್ ಇದೆ, ಯಾರನ್ನೂ ಕೇಳದೆ ೫೫ ಲಕ್ಷ ರೂಪಾಯಿಗಳನ್ನು ಕೊಡಬೇಕಾದರೆ ಇದನ್ನು ಅದಕ್ಷತೆಯೆಂದು ಹೇಳಿದ್ದರೆ ಹೇಗೆ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು "ಮಿಸ್ ಅಪ್ರೊಪ್ರಿಯೇಷನ್" ಎನ್ನುವ ಶಬ್ದವನ್ನು ಬಳಸಿದ್ದಾರೆ.....if it is a continuous rsivelry I cannot answer. It is for you to put a question and take an answer whatever it is. ಕಾರ್ಪೊರೇಷನ್ ಆಕ್ಟ್‌ಗೆ ವಿರುದ್ಧವಾಗಿ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. ಇದನ್ನು ನಾನಂ

ಎಕ್ಸಾಮಿನ್ ಮಾಡಿಸುತ್ತೇನೆ. ತತ್‌ಕ್ಷಣ ಏನು ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂದು ಹೇಳಿದ್ದೇನೆ. ಇದರಲ್ಲಿ ಆದಕ್ಷತೆ ಇದೆಯೆಂದು ಏನು ಹೇಳಿದ್ದಾರೆ, ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಇದನ್ನು ಅವರು ಗ್ರಾಂಟ್ ರೂಪದಲ್ಲಿ ಕೊಡಬೇಕೆಂದು ಕೇಳಿದರು. ನಾವು ಇದನ್ನು ಸಾಲ ಅಂತ ಕೊಟ್ಟಿದ್ದೇವೆ. ಇದು ಕಾಕತಾಳೀಯವಾದದ್ದು. ಅವರು ಸೆಪ್ಟೆಂಬರ್‌ನಲ್ಲಿ ಕೇಳಿದರು, ನಾವು ಜನವರಿಯಲ್ಲಿ ಕೊಟ್ಟಿದ್ದೇವೆ ಜನವರಿಯಲ್ಲಿ ಚುನಾವಣೆ ಬರುತ್ತದೆ ಎಂದು ನಮಗೆ ಕನಸು ಮನಸ್ಸಿನಲ್ಲೂ ಇರಲಿಲ್ಲ. ಶ್ರೀಮಾನ್ ಕೆ. ಎಚ್. ಪಾಟೀಲರಿಗೆ ಕನಸ್ಸು ಬಂದಿತ್ತೋ ಗೊತ್ತಿಲ್ಲ.

ಶ್ರೀ ಕೆ. ಎಚ್. ಪಾಟೀಲ್.—ಯಾವ ಸೆಕ್ಷನ್ ಪ್ರಕಾರ, ಯಾವ ಶರಾವು ಪ್ರಕಾರ ಈ ಲೋನ್ ಅನ್ನು ಕೊಟ್ಟಿದ್ದೀರಿ ? ಇದರ ಬಗ್ಗೆ ಕ್ಯಾಬಿನೇಟ್ ನಿರ್ಣಯ ಆಗಿದೆಯೆ ? There is no proision in the budget. A separate order will be issued to use it as a consolidated fund. ಇದನ್ನು ನಾನು ಹೊಣೆಗೇಡಿತನ ಎಂದು ಕರೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಇದು ಕಾನೂನಿಗೆ ವಿರುದ್ಧವಾಗಿದೆಯೋ ಇಲ್ಲವೋ ಎನ್ನುವುದನ್ನು...

ಶ್ರೀ ಕೆ. ಎಚ್. ಪಾಟೀಲ್.—ಯಾವ ಕಾನೂನು ನಿಯಮ ಪ್ರಕಾರ, ಮತ್ತ ಶರಾವು ಪ್ರಕಾರ ಇದನ್ನು ಕೊಟ್ಟಿದ್ದೀರಿ ?

SRI A. LAKSHMISAGAR.—It is made on the request of the Commissioner of the Hubli-Dharwar Corporation.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಲಕ್ಷ್ಮೀಸಾಗರ್ ಅವರು ನಗರಾಭಿವೃದ್ಧಿ ಸಚಿವರು ಮಾತ್ರವಲ್ಲ ಕಾನೂನು ಮಂತ್ರಿಗಳೂ ಕೂಡ ಆಗಿದ್ದಾರೆ. ಹಿರಿಯ ಸದಸ್ಯರಾದ ಶ್ರೀ ಪಾಟೀಲರು ನೇರವಾಗಿ ಪ್ರಶ್ನೆಯನ್ನು ಕೇಳಿದ್ದಾರೆ, ಕಾರ್ಪೊರೇಷನ್ ಆ್ಯಕ್ಟ್ ೧೯೭೬ರ ಸೆಕ್ಷನ್ ೧೫೪ ಏನಿದೆ, ಅದರ ವಿರುದ್ಧವಾಗಿ ೫೫ ಲಕ್ಷ ರೂಪಾಯಿಗಳನ್ನು ಚುನಾವಣೆ ಕಾಲದಲ್ಲಿ ಕೊಟ್ಟಿದ್ದೀರಿ. ಇದರಲ್ಲಿ ರಾಜಕೀಯ ಉದ್ದೇಶ ಇದೆ, ಇದರಲ್ಲಿ ಮಾನ್ಯ ಮಂತ್ರಿಗಳ ಹಸ್ತಕ್ಷೇಪ ಇದೆ ಎನ್ನುವ ಮಾತನ್ನು ಹೇಳಿದ್ದಾರೆ. ಇಲ್ಲಿ ಏನಾಗಿದೆ ಎಂದರೆ. ಕೇವಲ ಕಾರ್ಪೊರೇಷನ್ ಕಮೀಷನರ್ ಅವರ ಪತ್ರ ಸರ್ಕಾರಕ್ಕೆ ಬಂದಿದೆ. ಅದರ ಮೇಲೆ ೫೫ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇದು ಯಾವ ಕಾಲದಲ್ಲೂ ಆಗಿರಲಿಲ್ಲ. ಇದರ ಮೇಲೆ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಇದರಲ್ಲಿ ಪರಿಶೀಲನೆ ಮಾಡುವುದು ಏನಿದೆ ? ಕಾರ್ಪೊರೇಷನ್ ಆ್ಯಕ್ಟ್‌ನ್ನು ಉಲ್ಲಂಘನೆ ಮಾಡಿ ಕಾರ್ಪೊರೇಷನ್ ಸಭೆಯಲ್ಲಿ ಕೂಡ ತೀರ್ಮಾನ ಆಗಿಲ್ಲ. ರೆಗ್ಯುಲೇಷನ್ ಕೂಡ ಸರ್ಕಾರಕ್ಕೆ ಬಂದಿಲ್ಲ. ಹೀಗಿದ್ದೂ ಹಣ ಕೊಟ್ಟಿರುವುದು ತಪ್ಪು. ಆಗಿರುವ ತಪ್ಪಿಗೆ ಹೀಗೆ ಡಿಫೆಂಡ್ ಮಾಡುವುದಕ್ಕೆ ಹೋಗಬಾರದು. ಚುನಾವಣೆಯಲ್ಲಿ ಓಟು ತೆಗೆದುಕೊಳ್ಳುವುದಕ್ಕೋಸ್ಕರ ಕೊಟ್ಟಿದ್ದಾರೆ ಎಂದು ಹೇಳಬೇಕಾಗುತ್ತದೆ.

SRI A. LAKSHMISAGAR.—I am on a point of order. This is not the way of putting the supplementary. He is delivering a speech.

ಅಧ್ಯಕ್ಷರು.—ಅರ್ಧ ಗಂಟೆ ಚರ್ಚೆಗೆ ನೋಟೀಸ್ ಬೇಕಾದರೆ ಕೊಡಿ.

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್.—ಇದಕ್ಕೆ ಅರ್ಧಗಂಟೆ ಚರ್ಚೆ ಬೇಕಾಗುತ್ತದೆ. ಇದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಗೆ ಹೇಳುತ್ತಾರೆ ?

(ಗೊಂದಲ)

ಶ್ರೀ ಕೆ. ಎಚ್. ಪಾಟೀಲ್.—ಶ್ರೀ ಲಕ್ಷ್ಮೀಸಾಗರ್ ಅವರು ಕಾನೂನು ನೋಡದೆಯೇ ಪರಿಶೀಲನೆ ಮಾಡಬೇಕು, ನೋಡಬೇಕು ಎಂದು ಹೇಳುವುದಾದರೆ ನಾವೇನು ಶಾಲೆಯ ಹುಡುಗರೆ ? ಯಾವಾಗ ಸದನದಲ್ಲಿ ಒಂದು ಪ್ರಶ್ನೆ ಕೇಳುತ್ತೇವೆ, ಅದಕ್ಕೆ ಇಲ್ಲೇ ಉತ್ತರ ಕೊಡಬೇಕಾಗುತ್ತದೆ. ಬೇರೆ ಯಾರಾದರೂ ಮಂತ್ರಿಗಳಾಗಿದ್ದರೆ 'ಇದನ್ನು ಅಭ್ಯಾಸ ಮಾಡುತ್ತೇನೆ' ಎಂದು ಹೇಳಿದ್ದರೆ ಒಪ್ಪಬಹುದಾಗಿತ್ತು. ಇವರು ಹೀಗೆ ಹೇಳಿದರೆ ಹೇಗೆ ?

ಅಧ್ಯಕ್ಷರು.—ನಾನು ಆಗಲೇ ಹೇಳಿದ್ದೇನೆ. ಅರ್ಧ ಗಂಟೆ ಚರ್ಚೆ ಮಾಡಬೇಕೆಂದು ನೀವು ಇಚ್ಛೆ ಪಡುವುದಾದರೆ ನೋಟೀಸ್ ಕಳಿಸಿಕೊಡಿ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ತಾವು ಅರ್ಧಗಂಟೆ ಚರ್ಚೆಗೆ ಅವಕಾಶ ಕೊಡ್ತೀನಿ ಎಂದು ಹೇಳಿದ್ದೀರಿ. ನಾನು ಒಂದು ಮಾತನ್ನು ಇಲ್ಲಿ ಹೇಳಬೇಕಾಗುತ್ತದೆ. ಶ್ರಿಮಾನ್ ಧರ್ಮಸಿಂಗ್ ಅವರು ಮಾಡಿರತಕ್ಕ ಆಪಾದನೆಯಲ್ಲಿ ಯಾವುದೇ ಹುರುಳಿಲ್ಲ. I repudiate all of them.

(ಗೊಂದಲ)

ಅಧ್ಯಕ್ಷರು.—ನೀವು ನೋಟೀಸ್ ಕೊಡಿ. ಅವಕಾಶ ಕೊಡುವವನು ನಾನು.

ಶ್ರೀ ಎಸ್. ಬಂಗಾರಪ್ಪ.—ಅವಕಾಶ ಕೊಡುತ್ತೇನೆ ಎಂದು ತಾವು ಹೇಳಿದ್ದೀರಿ. ಆದರೆ ಮಾನ್ಯ ಲಕ್ಷ್ಮೀಸಾಗರ್ ಅವರಿಗೆ ಸರ್ಕಾರವನ್ನು ಡಿಫೆಂಡ್ ಮಾಡಬೇಕಾಗಿದೆ. ಕಾನೂನು ಬಿಟ್ಟುಕೊಟ್ಟು ಹಣವನ್ನು ಕೊಟ್ಟಿರುವ ವಿಚಾರದಲ್ಲಿ ಅವರು ಹುರುಳು ಇಲ್ಲವೆಂದು ಹೇಳಿಬಿಟ್ಟರೆ ಹೇಗೆ ?

ಅಧ್ಯಕ್ಷರು.—ಮಾನ್ಯ ಬಂಗಾರಪ್ಪನವರೇ. ಈ ವಿಷಯವನ್ನು ಇಲ್ಲಿಗೆ ಮುಕ್ತಾಯ ಮಾಡೋಣ. ಇನ್ನು ನಾಲ್ಕನೇ ಪಟ್ಟಿಯಲ್ಲಿ ಉಳಿದುಕೊಂಡಿದ್ದ ಕ್ಯಾರಿಡ್ ಓವರ್ ಪ್ರಶ್ನೆ ಸಂಖ್ಯೆ ೨೨೯. ಭೂಪತಿಯವರೇ ಪ್ರಶ್ನೆ ಕೇಳಿ.

೨೨೯. ಶ್ರೀ ಯು. ಭೂಪತಿ (ಸಂಡೂರು). ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಕಾರ್ಮಿಕ ಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

(ಅ) ಬಳ್ಳಾರಿ ಮತ್ತು ಹೊಸಪೇಟೆ ನಡುವೆ ಕಬ್ಬಿಣದ ಅದಿರು ತುಂಬುವ ೩,೫೦೦ ಮಂದಿ ದಿನಗೂಲಿ ಕಾರ್ಮಿಕರ ವಸತಿಗಾಗಿ ಸರ್ಕಾರದವರು ಕೈಗೊಳ್ಳುವ ಕ್ರಮಗಳೇನು,

(ಆ) ಹೆಚ್ಚಿನ ಸಂಖ್ಯೆಯ ಕಾರ್ಮಿಕರು ರೈಲ್ವೆಯವರ ಸ್ಥಳದಲ್ಲಿ ವಾಸಿಸುತ್ತಿದ್ದು, ಅಲ್ಲಿಂದ ಖಾಲಿ ಮಾಡಲು ಅವರಿಗೆ ತಿಳಿವಳಿಕೆ ಪತ್ರಗಳು ಬಂದಿರುವುದರಿಂದ, ಅವರಿಗೆ ತಕ್ಷಣವೇ ವಸತಿಗಾಗಿ ಜಮೀನನ್ನು ಒದಗಿಸಲಾಗುವುದೇ,

(ಇ) ಹಾಗಿದ್ದಲ್ಲಿ, ವಸತಿ ಸೌಕರ್ಯವನ್ನು ಇನ್ನು ಎಷ್ಟು ಅವಧಿಯಲ್ಲಿ ಪೂರೈಸಲಾಗುವುದು ?

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಮಂತ್ರಿಗಳು),—

(ಅ) ದಿನಗೂಲಿ ಕಾರ್ಮಿಕರಿಗೆ ರಾಜ್ಯ ಸರ್ಕಾರದಲ್ಲಿ ಗೃಹನಿರ್ಮಾಣ ಯೋಜನೆ ಜಾರಿಯಲ್ಲಿಲ್ಲ.

(ಆ) ಉದ್ಭವಿಸುವುದಿಲ್ಲ.

(ಇ) ಉದ್ಭವಿಸುವುದಿಲ್ಲ.

ಶ್ರೀ ಯು. ಭೂಪತಿ.—ನನಗೆ ಆಶ್ಚರ್ಯ ಏನೆಂದರೆ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಮಾನ್ಯ ಮಂತ್ರಿಗಳು ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಇಂದು ನನಗೆ ಬಂದಿರುವ ಮಾಹಿತಿ ಪ್ರಕಾರ ನಾನು ಕೇಳಿರುವ ಪ್ರಶ್ನೆ ಏನಿದೆ, ದಿನಗೂಲಿ ಕಾರ್ಮಿಕರ ವಸತಿ ಸಮಸ್ಯೆ ಬಗ್ಗೆ. ಕಾರ್ಮಿಕ ಇಲಾಖೆಯಲ್ಲಿ ಯಾವ ರೆಕಾರ್ಡ್ ಕೂಡ ಇಲ್ಲವೆಂದು ನಾನು ಹೇಳಬಯಸುತ್ತೇನೆ. ಆದ್ದರಿಂದಲೇ ಅವರಿಂದ ಈ ಉತ್ತರ ಬಂದಿದೆ. ಕಬ್ಬಿಣದ ಅದಿರು ತುಂಬುವ ಈ ೩೫೦೦ ಮಂದಿ ದಿನಗೂಲಿ ಕಾರ್ಮಿಕರು ವಾಸ ಮಾಡಲಿಕ್ಕೆ ಜಾಗ ಇಲ್ಲ. ರೈಲ್ವೆಯವರಿಗೆ ಸೇರಿದ ಜಾಗದಲ್ಲಿ ಅವರು ವಾಸ ಮಾಡುತ್ತಿದ್ದಾರೆ. ಜಾಗ ಖಾಲಿ ಮಾಡಿ ಎಂದು ಅವರಿಗೆ ನೋಟೀಸುಗಳು ಬರುತ್ತಿವೆ. ಅವರಿಗೆ ಮುಂದೆ ವಾಸಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ ಎಂದು ಕೇಳಿದರೆ ಸರ್ಕಾರವರು ಇಷ್ಟು ಲಘುವಾಗಿ ಉತ್ತರ ಕೊಡುವುದು ಸರಿಯಲ್ಲ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದಲ್ಲಿ ಇಂತಹ ಯೋಜನೆ ಇಲ್ಲವಾ. ಕೇಂದ್ರ ಸರ್ಕಾರದಲ್ಲಿ ಈ ಯೋಜನೆ ಇದೆ. ತಾವು ಸೈಟುಗಳನ್ನು ಕೊಡಿಸಿದರೆ ಕೇಂದ್ರಕ್ಕೆ ಶಿಫಾರಸು ಮಾಡಿ ಸಾಲವನ್ನು ಕೊಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಯು. ಭೂಪತಿ.—ಕಂಟ್ರಾಕ್ಟ್ ಲೇಬರ್ಸ್ ಬಗ್ಗೆ ನಿಮ್ಮಲ್ಲಿ ದಾಖಲೆ ಇಲ್ಲ. ಲೇಬರ್ ಡಿಪಾರ್ಟ್‌ಮೆಂಟ್ ಅವರು ಕಣ್ಣು ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆ. ಇದರಲ್ಲಿ (ಲೇಬರ್ಸ್) ಅಭಿವೃದ್ಧಿಗಾಗಿ ಯಾವ ಯೋಜನೆಯೂ ಇಲ್ಲ. ಇದರ ಬಗ್ಗೆ ತಾನು ಏನು ಹೇಳುತ್ತೀರಿ ?